ಎಂದೆಲ್ಲಾ ಧ್ವನಿ ಮಾಡುತ್ತ ಮಿಮಿಕ್ರಿ ಪಟುಗಳೇ ಆಗಿ ಬಿಡುತ್ತಿದ್ದರು. ಈ ಶಬ್ದಾಡಂಬರ ಹೊಸದೆನಿಸುತ್ತಿತ್ತು, ಪ್ರಿಯವಾಗುತ್ತಿತ್ತು ಮಗುವಿಗೆ. ಕ್ರಮೇಣ ಅವನ ಅಳುವಿನ ನಿಲುಗಡೆ, ಕಣ್ಣೀರ ಪಸೆಯೊಂದಿಗೇ. ಆಗಿನ ಮುಗ್ಧ ಮುಖಭಾವಕ್ಕೋ ಕಾಮನ ಬಿಲ್ಲಿನ ಸೊಗಸು!

ಆನಂದರ ಸಂಸಾರವೆಂದರೆ ಪತ್ನಿ ಲಕ್ಷ್ಮೀದೇವಿ, ಒಬ್ಬನೇ ಸುಕುಮಾರ ವಿನೀತ್, ಸೊಸೆ ಸಹನಾ, ವಂಶದ ಕುಡಿ ಅನೀಶ್. ವಿನೀತ್ ವಿದೇಶದಲ್ಲಿ ಇಂಜಿನಿಯರ್ ಆಗಿ ದುಡಿಯುತ್ತಿದ್ದಾತ ಅಲ್ಲಿನ ಕೆಲವೊಂದು ಸಮಸ್ಯೆಗಳಿಂದ ಬೇಸತ್ತು ಆ ಉದ್ಯೋಗ ತೊರೆದು ಸ್ವದೇಶಕ್ಕೆ ಮರಳಿದ್ದ. ಬಾಳಮುಸ್ಸಂಜೆಯಲ್ಲಿನ ದಂಪತಿಗಳಿಗೆ ಮಗ ಸ್ವದೇಶಕ್ಕೆ ಹಿಂತಿರುಗಿದ್ದು ಪರಮಾನಂದದ ವಿಷಯ. ಬಂದವನೇ ದೂರದ ಮುಂಬೈಯಲ್ಲಿ ಸೆಟ್ಲ್ ಆದದ್ದು ತುಸು ಬೇಸರ ತಂದೊಡ್ಡಿದರೂ ಸ್ವದೇಶವಾಸಿಯಾದನಲ್ಲ ಎಂಬ ಸಮಾಧಾನದ ಪರಿವೇಶ ಅದಕ್ಕಿತ್ತು.

ಮಗನ ಪರಿವಾರದ ಆಗಮನ ನಿರೀಕ್ಷೆಯಲ್ಲಿ ದಂಪತಿಗಳು ಸದಾ ಚಾತಕ ಪಕ್ಷಿಗಳೇ. ವರ್ಷಕ್ಕೊಮ್ಮೆಯೋ ವಿಶೇಷ ಸಂದರ್ಭಗಳಲ್ಲೋ, ಆ ಪುಟ್ಟ ಪರಿವಾರ ಬಂದಿಳಿದಾಗ ಆನಂದರ ಮನೆಯಲ್ಲಿ ಹರ್ಷ ವರ್ಷ. ಸಧ್ಯಕ್ಕೆ 'ಅಷ್ಟೇ ಲಭ್ಯ' ಎಂಬ ಸಂತೃಪ್ತ ಭಾವ ರೂಢಿಸಿಕೊಂಡಿದ್ದರು ದಂಪತಿಗಳು, ಲಕ್ಷ್ಮೀದೇವಿಯವರಂತೂ ಹರೆಯ ಮತ್ತೆ ಉಕ್ಕಿ ಬಂದವರಂತೆ ಮುಂಜಾವವೇ ಎದ್ದು ಮನೆ ಕೆಲಸಗಳನ್ನೆಲ್ಲ ಸರಸರನೆ ಲೀಲಾಜಾಲವಾಗಿ ನಿಭಾಯಿಸುತ್ತ ಉಳಿಸಿದ ಪುರುಸೊತ್ತನ್ನೆಲ್ಲ ಅನೀಶನಿಗಾಗಿಯೇ ಮೀಸಲಿಡುತ್ತಿದ್ದರು.

ಮಗುವಿನೊಡನೆ ಆಟ, ಕೊಂಡಾಟಗಳೇ ಕುಷಿಯ ಕ್ಷಣಗಳು ಅವರಿಗೆ. ಅವನ 'ದೊಮ್ಮ ದೊಮ್ಮ' ಎಂಬ ತೊದಲು ಕರೆಯಂತೂ ಅಮೃತವರ್ಷವೇ ಆಗಿ ಕಿವಿ ತುಂಬುತ್ತಿತ್ತು.

*****

ಪ್ರೈವೇಟ್ ಕಾಲೇಜೊಂದರಲ್ಲಿ ಗಣಿತ ಉಪನ್ಯಾಸಕರಾಗಿದ್ದವರು ಆನಂದರು. ನಿವೃತ್ತಿಗೆ ಏಳು ವರ್ಷಗಳಿರುವಾಗ ಪದೋನ್ನತಿಯ ಅವಕಾಶ ದೊರೆಯಿತು. ಹಿರಿತನದ ಹಿನ್ನೆಲೆಯಲ್ಲಿನ ಪ್ರಾಚಾರ್ಯಗಿರಿಯದು. ನಗರದ ಕೇಂದ್ರ ಸ್ಥಳದಲ್ಲಿರುವ ಮಹಿಳಾ ಪದವಿಪೂರ್ವ ಕಾಲೇಜು ಅವರದು. ವಿದ್ಯಾರ್ಥಿನಿಯರಾದರೂ ಎಂಥವರು? ಹೆಚ್ಚಿನವರು ಥಳುಕು ಬಳುಕಿನ ಸಿಂಗಾರಿಯರು. ಮಾನಸಿಕವಾಗಿ ಪೂರ್ಣ ಮಾಗದ ದೋರೆಗಾಯಿ ತರಹದ ಹುಡುಗಿಯರು, ಅವರದೇ ಸಾಮ್ರಾಜ್ಯ.

ಪ್ರಾಚಾರ್ಯ ಪೀಠದಲ್ಲಿದ್ದು ಕಾರ್ಯ ನಿರ್ವಹಣೆ ಎಂದರೆ ಪಂಚಾಗ್ನಿ ತಪಸ್ಸಿನಂತೆ ಕಠೋರ. ವಿದ್ಯಾರ್ಥಿಯರು, ಸಹೋದ್ಯೋಗಿಗಳು, ಹೆತ್ತವರು, ಇಲಾಖಾ ಮೇಲಧಿಕಾರಿಗಳು ಮತ್ತು ಹೊರಗಿನವರೆಂಬ ಪಬ್ಲಿಕ್ ಜನರು– ಹೀಗೆ ಯಾರು ಎಂದು ಬೇಕಾದರೂ ಕಾವೇರಿಸಬಹುದಾದ ಪಂಚಾಗ್ನಿ ವರ್ತುಲದೊಳಗಿನ ಆಸನವದು. ಯಾವ ಕೆಲಸಕ್ಕೂ ಹಿಂಜರಿಕೆ ಇರಬಾರದ ಧೃತಿಯೊಂದಿಗೆ ಸರ್ವಾಯ ಸಹನೆಯ ಬೆಂಗಾವಲು ಬೇಕಿತ್ತು. ಒಂದಿಷ್ಟು ಆತ್ಮವಿಶ್ವಾಸ, ಸಹೋದ್ಯೋಗಿಗಳ ಆತ್ಮೀಯ ಸಹಕಾರ ಎರಡನ್ನೂ ನೆಮ್ಮಿಕೊಂಡು ಹೊಸ ಸವಾಲಿಗೆ ಕೊರಳೊಡ್ಡಿದರು ಆನಂದರು. ಜತೆಗೆ ದೈವಕೃಪೆಯೆಂಬ ಗಟ್ಟಿ ಆಲಂಬನವೂ ಮುನ್ನಡೆಸಿತ್ತು.

ಗಣಿತಶಾಸ್ತ್ರದ ಉಪನ್ಯಾಸಕರಾಗಿದ್ದಾಗ ಪಾಠ ಪ್ರವಚನವೆಂಬ ಪ್ರಧಾನ ಕಾಯಕ ಮಾತ್ರ ನಿರ್ವಹಣೆ. ಕಾಲೇಜಿನ ಸಾರಥ್ಯಕ್ಕೆ ಹೆಗಲು ನೀಡಿದ್ದೇ ತಡ, ಅನುಭವಗಳ ಮಹಾಸಂತೆಯನ್ನು ಹೊಕ್ಕಂತಾಯ್ತು. ಒಡ್ಡು ಒಡೆದ ನೀರು ಎಲ್ಲೆಡೆಗಳಿಂದ ರಭಸಗತಿಯಿಂದ ನುಗ್ಗುವಂತೆ ಈ ಮಹಾಪೂರ 'ವಿಶೇಷ ಸಂಕಲನವಾಗುತ್ತ ಅವರ ಜೀವನ ಗಣಿತವನ್ನು ಅನುಭವ ಸಂಪನ್ನವಾಗಿಸಿತ್ತು.

ಅನುದಿನವೂ ವಿಸಿಟರ್ಸ್, ಅವರಲ್ಲಿ ಹೆತ್ತವರದೇ ಸಿಂಹಪಾಲು... ನಿಮಿತ್ತಗಳೋ ನೂರಾರು...

'ನಮಸ್ಕಾರ ಸರ್... ನನ್ನ ಮಗಳು ನಮ್ರತಾ, ಫಸ್ಟ್ ಪಿಯುಸಿ ಆರ್ಟ್ಸ್... ನಿನ್ನೆಯಿಂದ ಜ್ವರ ಬರ್ತಿದೆ ಅವಳಿಗೆ... ಬೇಡ ಅಂದ್ರೂ ಇವತ್ತು ಕಾಲೇಜಿಗೆ ಬಂದಿದ್ದಾಳೆ. ಬೆಳಗ್ಗಿನ ಟ್ಯಾಬ್ಲೆಟ್ ಮರ್ತು ಬಂದಿದ್ದಾಳೆ... ಪ್ಲೀಸ್, ಇದನ್ನು ಅವಳಿಗೆ ತಲುಪಿಸ್ತೀರಾ... ಈಗ್ಲೇ ತಗೊಳ್ಳಿ. ಅವಳು....'

ಮೆಡಿಸಿನ್ ಟ್ಯಾಬ್ಲೆಟ್ ಸ್ಟ್ರಿಪ್ ಒಂದನ್ನು ಹಿಡಿದು ಕೈ ಮುಂದೆ ಚಾಚಿದ ಅಪ್ಪ... ತುಂಬ ವರೀಡ್... ವಿವರ ನೀಡಿದ ಬಡ ಬಡ ಮಾತು, ಬೇಡವೆಂದರೆ ಬುಡ ಕುಸಿದ ಬಾಳೆಗಿಡವೇ ಆತ!...

'ಆಯ್ತು... ಅದಕ್ಕೇನು?' ಬೆಲ್ ಒತ್ತಿ ಜವಾನಿಗೆ ವಿಷಯ ತಿಳಿಸಿ ಬೀಳ್ಕೊಡುವಷ್ಟರಲ್ಲಿ ಮತ್ತೊಬ್ಬಾಕೆ ನಡುವಯಸ್ಸಿನವಳು ಪ್ರತ್ಯಕ್ಷ...

'ಸರ್... ನಮ್ಮ ಸ್ಪಂದನಳ ತಂದೆಗೆ ಆಕ್ಸಿಡೆಂಟ್ ಆಗಿ ಹಾಸ್ಪಿಟಲ್‌ನಲ್ಲಿದ್ದಾರೆ. ನಾನು ಅವಳ ಚಿಕ್ಕಮ್ಮ ರಾಧಾ... ಅವಳನ್ನು ಸ್ವಲ್ಪ ಕಳಿಸ್ತೀರಾ ಪ್ಲೀಸ್... ಅವ್ಳ ಅಮ್ಮ ಕಂಗಾಲಾಗಿ ಕೂತಿದ್ದಾರೆ...'

ಕಾರ್ಮೋಡ ಮುಸುಕಿದ ಮುಖದಾಕೆ ಆತಂಕ ಹೊತ್ತ ವಿನೀತ ನಿರೀಕ್ಷಕಿ.

'ಹೌದಾ?... ಹಾಗಿದ್ದರೆ ಈಗ? ಪರ್ವಾಗಿಲ್ವಾ? ಆಯ್ತು... ನೀವು ಗೊತ್ತು ನನ್ಗೆ... ಗುರುತಿಲ್ಲದವರತ್ರ ಕಳಿಸೊದಿಲ್ಲ... ಕರ್ಕೊಂಡು ಹೋಗಿ... ಧೈರ್ಯ ಹೇಳಿ ಸ್ವಲ್ಪ...'

ಮತ್ತೆ ಜವಾನಿಗೆ ಕರೆ, ವಿಷಯ ತಿಳಿಸಿದ್ದಾಯ್ತು.

ಈ ಬಾರಿ ಬಂದವರು ಸಿರಿ ನೆರಿ ಮುಖದ ಅಜ್ಜಿ. ಕೃಶಾಂಗಿ ದೈನ್ಯತೆಯ ಸಾಕಾರವಾಗಿ ನಿಂತಿದ್ದರು.

'ಸರ್... ಏನೋ ಸ್ಕಾಲರ್‌ಶಿಪ್ ಕೊಡ್ತೀರಂತಲ್ಲ? ತಂದೆ ಇಲ್ಲದವರಿಗೆ ಮೊದಲ ಆದ್ಯತೆ ಅಂತೆ. ನಾನು ಸೆಕೆಂಡಿಯರ್ ಸಾಯನ್ಸ್‌ನ ದೀಪಶ್ರೀಯ ಅಜ್ಜಿ ಅವ್ಳಿಗೆ ತಂದೆ ತಾಯಿ ಇಬ್ರೂ ಇಲ್ಲ, ಸ್ಕಾಲರ್‌ಶಿಪ್ ಸಿಗ್ಬಹುದಾ? ಪ್ಲೀಸ್ ಕೊಡಿಸ್ತೀರಾ?...

'ಅದು ಪಿಟಿಎ ಫಂಡಿನ ಸ್ಕಾಲರ್‌ಶಿಫ್, ಒಂದು ಕಮಿಟಿ ಮೀಟಿಂಗ್ ಆಗ್ಬೇಕು, ಆಮೇಲೆ ಎಲ್ಲ... ಒಂದು ಅಪ್ಲಿಕೇಶನ್ ಕೈಯಲ್ಲಿ ಬರ್ದದ್ದೂ ಆದೀತು. ಆಫೀಸಿನಲ್ಲಿ ಕೊಡಿ. ಅಲ್ಲೇ ವಿಚಾರಿಸ್ತೀರಾ? ವಿವರ ಹೇಳ್ತಾರೆ...'

ವೃದ್ಧೆಯನ್ನು ಸಾಗಹಾಕಿದ್ದಾಯ್ತು. ದೀಪಶ್ರೀಯ ಹೆಸರು ಪರ್ಸನಲ್ ಡೈರಿಯಲ್ಲಿ ನೋಟ್ ಆಗಿತ್ತು.

ಒಂದೊಂದೂ ಅಪೂರ್ವ ಚಿತ್ತಾರವಾಗಬಹುದಾದ ಭಾವುಕ ಸನ್ನಿವೇಶಗಳೇ... ಅವರನ್ನು ಬೆಚ್ಚಗಿರಿಸುತ್ತ ಚಿಂತನೆಗೆ ಹಚ್ಚಿತ್ತು.

....ಅಣ್ಣಾ ಈ ಹೆತ್ತವರ ಅಂತಃಕರಣಕ್ಕೆ ಅದೆಷ್ಟು ಮುಖಗಳು... ಒಳಗೊಂಡಿದ್ದು ಎಂಥೆಂಥಾ ನವಿಲು ಪದರಗಳು! ಒಬ್ಬನೇ ಸುಪುತ್ರನ ತಂದೆ ನನಗೋ ಅಂತಹ ಸೂಕ್ಷ್ಮ ಭಾವಗಳು ಹತ್ತಲಿಲ್ಲವೇಕೆ? ಅಥವಾ ಗಂಡಾಗಿ ನನ್ನ ಕಾಡಿತ್ತೇ ಅಭಾವ? ಇಲ್ಲವೇ ಲಕ್ಷ್ಮಿಗೆ ಎಲ್ಲಾ ಗೊತ್ತಿದೆ, ಅದೆಲ್ಲ ಅವಳದೇ ಗುತ್ತಿಗೆ ಎಂದು ಅಂತ್ಯದ ಆರಾಮದಲ್ಲಿದ್ದೇನೆ ನಾನು? ಇದೇ ಹೌದಿರಬೇಕು!

*****

ಅಬ್ದುಲ್ಲಾ ಎಂಬುವರು ಅಂದು ಕಾಲೇಜಿನ ಶಿಕ್ಷಕ – ರಕ್ಷಕ ಸಂಘದ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಅವರು ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ಜಾಣೆ ಮಮ್ತಾಜ್ ಎಂಬವಳ ತಂದೆ. ಪ್ರಾಚಾರ್ಯ ಆನಂದರು ಎಲ್ಲ ಪದಾಧಿಕಾರಿಗಳೊಂದಿಗೆ ಅವರನ್ನೂ ಹಾರ್ದಿಕವಾಗಿ ಅಭಿನಂದಿಸಿದ್ದರು, ವೇದಿಕೆಗೆ ಕರೆದು ಗುಲಾಬಿ ಹೂ ಸಹಿತ ಅಂದಿನಿಂದ ಸಂಘದ ಕಾರ್ಯಕಲಾಪಗಳಿಗೆಲ್ಲ ಹಾಜರಾಗುತ್ತ ನಿಕಟವಾಗ ತೊಡಗಿದರು. ಮಗಳ ಶೈಕ್ಷಣಿಕ ಪ್ರಗತಯ ಬಗ್ಗೆ ಆಗಾಗ ವಿಚಾರಣೆ ಬೇರೆ. ನಡುಹರೆಯದ ಅವರು ತಮ್ಮ ವೃತ್ತಿ 'ಬಿಸಿನೆಸ್' ಎಂದು ಹೇಳಿಕೊಂಡಿದ್ದರು. ವಿವರ ತಿಳಿಸಿರಲಿಲ್ಲ. ಆನಂದರೂ ಹಾಗೆಲ್ಲ ವಿವರ ವಿಚಾರಿಸಿದವರಲ್ಲ.

ಸುಮಾರು ಎರಡು ತಿಂಗಳ ಬಳಿಕ ಭಾವಾವೇಶದ ಪರಮಾವಧಿ ಎನಸಬಹುದಾದ ಸನ್ನಿವೇಶವೊಂದು ಘಟಿಸಿತ್ತು. ಈ ಇಬ್ಬರ ನಡುವೆ. ಸಂಜೆ ಸುಮಾರು ಐದೂವರೆಯ ಸಮಯ. ಜವಾನರನ್ನೆಲ್ಲ ಆಗಲೇ ಮನೆಗೆ ಕಳುಹಿಸಿಕೊಟ್ಟಿದ್ದು ಒಂಟಿಯಾಗಿದ್ದ ಆನಂದರು... ಇನ್ನೇನು ತಮ್ಮ ಛೇಂಬರ್‌ಗೆ ಬೀಗ ಹಾಕಿ ಮನೆಗೆ ಹೊರಡಬೇಕು ಅಷ್ಟರಲ್ಲಿ...

ಗಾಜಿನ ಬಾಗಿಲ ಬಳಿ ಯಾರದೋ ನೆರಳಾಡಿತು... ಅಡ್ಡಡ್ಡ... ಮುಖವೊಂದು ಗೋಚರಿಸಿತು. ಅರೆ... ಅಬ್ದುಲ್ಲಾ!... ಏನೋ ಗಾಢಚಿಂತನೆ ಹೊತ್ತ ಗಂಭೀರ ಮುಖಭಾವ... ಬಾಗಿಲು ಅರೆದೂಡುತ್ತ ಆ ಮುಖವಷ್ಟೇ ಒಳಗೆ ತೂರಿತು...

'ನಮಸ್ಕಾರ... ಒಳಗೆ ಬರಬಹುದು?...!

'ನಮಸ್ಕಾರ... ಬನ್ನಿ... ಅದಕ್ಕೇನು?...'

ಒಳಬಂದವರು ಕುರ್ಚಿಯೊಂದರ ಬೆನ್ನು ಹಿಡಿದು ನಿಂತೇ ಇದ್ದರಾತ... ಮತ್ತೆ ಯೋಚನೆಯ ಧ್ವನಿ...

'ಸರ್... ನೀವು ಮನೆಗೆ ಹೊರಟ ಹಾಗಿದೆ... ಐದು ನಿಮಿಷ ಮಾತಾಡ್ಬಹುದಾ?... ಸ್ವಲ್ಪ ಪರ್ಸನಲ್'